# ರಾಮಕೃಷ್ಣ ಮಠ-ಮಿಷನ್ನಿನ ಇತ್ತೀಚಿನ ಚಟುವಟಿಕೆಗಳು

ಹೊಸ ಶಾಖಾ ಕೇಂದ್ರಗಳು: ೧. **ಶ್ಯಾಮಪುಕುರ:** ಇಲ್ಲಿಯವರೆಗೆ ಬಲರಾಮ ಮಂದಿರ ರಾಮಕೃಷ್ಣ ಮಠದ ಉಪಶಾಖೆಯಾಗಿದ್ದ ಈ ಕೇಂದ್ರವು ಈಗ ಪೂರ್ಣಪ್ರಮಾಣದ ಶಾಖಾಕೇಂದ್ರವಾಗಿದೆ. ೨. **ಕಥಾಮೃತ ಭವನ:** ಇಲ್ಲಿಯವರೆಗೆ ಬೇಲೂರು ಮಠದ ನೇರ ಉಸ್ತುವಾರಿಯಲ್ಲಿದ್ದ ಈ ಕೇಂದ್ರವು ಇನ್ನು ಮುಂದೆ ಶ್ಯಾಮಪುಕುರ ಆಶ್ರಮದ ಉಪಶಾಖೆಯಾಗಿ ಬದಲಾಗಿದೆ.

ಭಾರತದ ರಾಷ್ಟ್ರಪತಿಗಳಾದ ಶ್ರೀ **ರಾಮನಾಥ ಕೋವಿಂದ** ಅವರು ನವಂಬರ್ ೨೦ ರಂದು ಬೇಲೂರು ಮಠಕ್ಕೆ ಭೇಟಿಯಿತ್ತರು. ಅವರೊಂದಿಗೆ ಪಶ್ಚಿಮ ಬಂಗಾಳದ ಗವರ್ನರ್ ಶ್ರೀ ಕೇಸರಿನಾಥ ತ್ರಿಪಾಠಿಯವರೂ ಇದ್ದರು.



ರಾಷ್ಟ್ರಪತಿಗಳ ಭೇಟಿ

**ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಶತಮಾನೊತ್ಸವ:** **ಲಂಡನ್ ರಾಮಕೃಷ್ಣ ವೇದಾಂತ ಸೆಂಟರ್:** ನವೆಂಬರ್ ೧೨ರಂದು ಲಂಡನ್ನಿನ ವಿಂಬಲ್ಡನ್‌ನಲ್ಲಿರುವ ಸೋದರಿ ನಿವೇದಿತಾಳ ಮನೆಯಲ್ಲಿ **ಇಂಗ್ಲೀಷ್ ಹೆರಿಟೇಜ್** ಸಂಸ್ಥೆಯು ಸ್ಥಾಪಿಸಿದ **ನೀಲಿ ಸ್ಮಾರಕಫಲಕ (ಬ್ಲೂ ಪ್ಲೇಕ್)** ವನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿ, ಬ್ರಿಟನ್ನಿನ ಬಾರ್ನ್ ಎಂಡ್‌ಲ್ಲಿರುವ ರಾಮಕೃಷ್ಣ ವೇದಾಂತ ಸೆಂಟರ್‌ನ ಅಧ್ಯಕ್ಷರಾದ ಸ್ವಾಮಿ ದಯಾತ್ಮನಂದಜಿ,



ಲಂಡನ್‌ನಲ್ಲಿ ನಿವೇದಿತಾ ನೀಲಿ ಸ್ಮಾರಕಫಲಕ

ಲಂಡನ್ನಿನ ಮೇಯರ್ ಸಾದಿಕ್ ಖಾನ್ ಉಪಸ್ಥಿತರಿದ್ದರು. ಅನೇಕ ಮಂದಿ ಭಕ್ತರು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಮಾಸ್ಕೋ ರಾಮಕೃಷ್ಣ ಸೊಸೈಟಿ - ವೇದಾಂತ ಸೆಂಟರ್:** ಮಾಸ್ಕೋ ಕೇಂದ್ರವು ರಷ್ಯನ್ ರಾಯಭಾರಿ ಕಛೇರಿಯ ಸಹಭಾಗಿತ್ವದೊಂದಿಗೆ ರಷ್ಯನ್ ಫೆಡರೇಶನ್‌ನಲ್ಲಿ ಸೋದರಿ ನಿವೇದಿತಾಳ ೧೫೦ನೇ ಜನ್ಮಶತಮಾನೋತ್ಸವವನ್ನು ಆಚರಿಸಿತು.



ಮಾಸ್ಕೋದಲ್ಲಿ ನಿವೇದಿತಾ ೧೫೦ನೇ ಜನ್ಮಶತಮಾನೋತ್ಸವ

ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಶತಮಾನೋತ್ಸವವನ್ನು ಈ ಕೆಳಗಿನ ಶಾಖಾ ಕೇಂದ್ರಗಳು ಆಚರಿಸಿದವು: **ಅದ್ವೈತ ಆಶ್ರಮ** ಕೊಲ್ಕತ್ತಾ ; ರಾಮಕೃಷ್ಣ ಮಿಷನ್, **ಚಂಡೀಘಡ**; ರಾಮಕೃಷ್ಣ ಮಠ, **ಚಂಡೀಪುರ**; ಶಾರದಾ ವಿದ್ಯಾಲಯ, **ಚೆನ್ನೈ**; **ಕೊಯಮತ್ತೂರು** ಮಿಷನ್ ವಿದ್ಯಾಲಯ; ರಾಮಕೃಷ್ಣ ಮಿಷನ್ ಆಶ್ರಮ, **ಇಂದೋರ್**, ರಾಮಕೃಷ್ಣ ಮಿಷನ್ ಹಾಸ್ಪಿಟಲ್, **ಇಟಾನಗರ**; ರಾಮಕೃಷ್ಣ ಮಠ, **ಜೈಪುರ**; ರಾಮಕೃಷ್ಣ ಮಠ, **ಜಲಪ್ಯಾಗುಡಿ** (ಕಾಂಕುರಗಾಛಿ ಆಶ್ರಮದ ಸಹಯೋಗದೊಂದಿಗೆ); ರಾಮಕೃಷ್ಣ ಮಿಷನ್, **ಝೂರ್‌ಗ್ರಾಮ**; ರಾಮಕೃಷ್ಣ ಮಿಷನ್ ಆಶ್ರಮ, **ಕಡಪ**; ರಾಮಕೃಷ್ಣ ಮಠ, **ಕಾಂಕುರಗಾಛಿ**; ರಾಮಕೃಷ್ಣ ಮಿಷನ್, **ಮಧುರೈ**; ರಾಮಕೃಷ್ಣ ಮಠ, **ಮಾನಸದ್ವೀಪ**; ರಾಮಕೃಷ್ಣ ಆಶ್ರಮ, **ನಾಗಪುರ**, ರಾಮಕೃಷ್ಣ ಮಿಷನ್, **ಪೋರ್ಟ್‌ಬ್ಲೇರ್** (ಅಂಡಮಾನ್); ರಾಮಕೃಷ್ಣ ಮಿಷನ್, **ಪುರುಲಿಯಾ**; ರಾಮಕೃಷ್ಣ ಮಠ, **ಸೇಲಂ**; ರಾಮಕೃಷ್ಣ ಮಿಷನ್ **ಸಾರಗಾಛಿ**; **ಸ್ವಾಮೀಜಿಯವರ ಮನೆ**; ರಾಮಕೃಷ್ಣ ಮಿಷನ್ **ವಡೋದರ**; ರಾಮಕೃಷ್ಣ ಮಿಷನ್ ಆಶ್ರಮ, **ವಿಜಯವಾಡ**; ರಾಮಕೃಷ್ಣ ಮಿಷನ್ ಸೇವಾಶ್ರಮ, **ವೃಂದಾವನ**.

**ವಿದೇಶಗಳಲ್ಲಿ : ಚಿಕಾಗೋ, ಸಿಂಗಾಪುರ** ಆಶ್ರಮಗಳು.

### ಶಾಖಾಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮಗಳು

**ಪುರುಲಿಯಾ ವಿದ್ಯಾಪೀಠದಲ್ಲಿ** ವಜ್ರಮಹೋತ್ಸವದ ಸಲುವಾಗಿ ವರ್ಷಪೂರ್ತಿ ನಡೆದ ಕಾರ್ಯಕ್ರಮಗಳ ಅಂಗವಾಗಿ ಅಕ್ಟೋಬರ್ ೧೮ರಂದು ಹಲವು ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಇದರಲ್ಲಿ ಸುಮಾರು ೧೦೦ ಮಂದಿ ಸಾಧುಗಳು ಭಾಗವಹಿಸಿದ್ದರು. ಇದಲ್ಲದೆ, ನವೆಂಬರ್ ೧೫ರಿಂದ ೧೯ರ ವರೆಗೆ ಯುವ




ಹರಿಪಾಡ್ ರಾಮಕೃಷ್ಣ ಮಠದಲ್ಲಿ ನೈತಿಕ ಶಿಕ್ಷಣ ಕಾರ್ಯಕ್ರಮ




ವಿಜಯವಾಡ ರಾಮಕೃಷ್ಣ ಮಿಷನ್‌ನಲ್ಲಿ ಯುವ ಸಮ್ಮೇಳನ

ಸಮ್ಮೇಳನ, ಅಧ್ಯಾಪಕರ ಸಮ್ಮೇಳನ, ಪಾಲಕರ ಸಮ್ಮೇಳನ ಹಾಗೂ ಹಳೆಯ ವಿದ್ಯಾರ್ಥಿಗಳ ಸಭೆ ನಡೆದವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಸುಮಾರು ೨೦೦ ಮಂದಿ ಭಾಗವಹಿಸಿದ್ದರು.

ನವೆಂಬರ್ ೧೨ರಂದು **ಕೂಚ್ ಬಿಹಾರ್ ಮಠ**ದಲ್ಲಿನ ಆಸ್ಪತ್ರೆ ಕಟ್ಟಡದ ಮೊದಲನೇ ಮಹಡಿಯ ಉದ್ಘಾಟನೆ ನೆರವೇರಿತು.

### ನೈತಿಕ ಶಿಕ್ಷಣ ಹಾಗೂ ಯುವ ಸಮ್ಮೇಳನ ಕಾರ್ಯಕ್ರಮಗಳು

ನವೆಂಬರ್ ೧೬ ಹಾಗೂ ೨೦ **ಹರಿಪಾಡ್ ರಾಮಕೃಷ್ಣ** ಮಠವು ಮೂರು ಶಾಲೆಗಳಲ್ಲಿ **ನೈತಿಕ ಶಿಕ್ಷಣ ಕಾರ್ಯಕ್ರಮ**ಗಳನ್ನು ಏರ್ಪಡಿಸಿತು. ಇದರಲ್ಲಿ ಸುಮಾರು ೪೨೮ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನವೆಂಬರ್ ೩ರಂದು **ವಡೋದರಾ ರಾಮಕೃಷ್ಣ ಮಠ**ದಲ್ಲಿ ನಡೆದ **ನೈತಿಕ ಶಿಕ್ಷಣ ಕಾರ್ಯಕ್ರಮ**ದಲ್ಲಿ ೨೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನವೆಂಬರ್ ೨೬, ೨೭ರಂದು **ವಿಜಯವಾಡ ರಾಮಕೃಷ್ಣ ಮಿಷನ್** ನಲ್ಲಿ ನಡೆದ ಯುವ ಸಮ್ಮೇಳನದಲ್ಲಿ 'ವ್ಯಕ್ತಿತ್ವ ನಿರ್ಮಾಣ' ಪುಸ್ತಕದ ಕುರಿತು ನಡೆದ ಎರಡು ವಿಚಾರ ಸಂಕಿರಣಗಳಲ್ಲಿ ೨೫೦ ಮಂದಿ ಅಧ್ಯಾಪಕರು ಹಾಗೂ ೩೩೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಯೋಗ ಶಿಬಿರ

**ಗ್ವಾಲಿಯರ್ ರಾಮಕೃಷ್ಣ ಮಿಷನ್ ಆಶ್ರಮವು** ನವಂಬರ್ ೨೬ರಂದು **ರಾಮಕೃಷ್ಣ ವಿದ್ಯಾಮಂದಿರ**ದ ಆವರಣದಲ್ಲಿ **'ಯೋಗ ಕಾರ್ಯಾಗಾರ'**ವನ್ನು ನಡೆಸಿತು. ೩೨ ಶಾಲೆಗಳಿಂದ ಬಂದ ಯೋಗ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಆಸಕ್ತ ಯೋಗಪಟುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಪ್ರಾತಃಕಾಲ ೬.೩೦ರಿಂದ ೮.೩೦ರ ವರೆಗೆ ಉದ್ಘಾಟನೆ, ಸಂಕ್ಷಿಪ್ತ ಭಾಷಣಗಳ ಬಳಿಕ ಶಿಬಿರಾರ್ಥಿಗಳಿಗೆ ಉಚಿತ ಸಮವಸ್ತ್ರ ನೀಡಲಾಯಿತು. ಬಳಿಕ ಸೂರ್ಯನಮಸ್ಕಾರ ಮೊದಲಾದ ಯೋಗಾಸನಗಳ ಪ್ರದರ್ಶನ ನಡೆಯಿತು.

### ಸ್ವಚ್ಛಭಾರತ ಅಭಿಯಾನ

**ಕೊಯಮತ್ತೂರು ವಿದ್ಯಾಲಯವು** ನವೆಂಬರ್ ೧೧ರಿಂದ ೧೮ರ ವರೆಗೆ ನಡೆಸಿದ ನಾಲ್ಕು ಸ್ವಚ್ಛತಾ ಕಾರ್ಯಕ್ರಮಗಳಲ್ಲಿ , ವಿದ್ಯಾಲಯದ ವಿದ್ಯಾರ್ಥಿಗಳು ಶಾಲೆ, ಸರ್ಕಾರಿ ಕಛೇರಿಗಳೂ ಸೇರಿದಂತೆ ಕೆಲವು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಿದರು.

**ಮಂಗಳೂರು ರಾಮಕೃಷ್ಣ ಮಠ** ನಡೆಸುತ್ತಿರುವ **'ಸ್ವಚ್ಛ ಮಂಗಳೂರು'** ಕಾರ್ಯಕ್ರಮದ ನಾಲ್ಕನೇ ಹಂತದ ಕಾರ್ಯಕ್ರಮಗಳ ಉದ್ಘಾಟನೆಯನ್ನು ಕೇಂದ್ರ ಸರ್ಕಾರ ಕುಡಿಯುವ ನೀರು ಹಾಗೂ ನೈರ್ಮಲ್ಯ ಸಚಿವರಾದ ಶ್ರೀರಮೇಶ್ ಜಿಗಜಿಣಗಿಯವರು ನೆರವೇರಿಸಿದರು. ಇದರ ಅಂಗವಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು: ೧) ನಾಲ್ಕು ಭಾನುವಾರಗಳಂದು ಮಂಗಳೂರಿನಲ್ಲಿ ನಾಲ್ಕು ಕಾರ್ಯಕ್ರಮಗಳು. ೨) ೩೦೦ ಮಂದಿ ಸ್ವಯಂಸೇವಕರಿಂದ ಸುಮಾರು ೩೦೦೦ ಮನೆಗಳಿಗೆ ಭೇಟಿಯಿತ್ತು, ಸ್ವಚ್ಛತೆಯ ಅರಿವನ್ನು ಮೂಡಿಸುವ ಕಾರ್ಯಕ್ರಮ ೩) ದಕ್ಷಿಣ ಕನ್ನಡ ಜಿಲ್ಲೆಯ ೮೦ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ. ೪) ೧೦೧ ಶಾಲೆಗಳಲ್ಲಿ ನಡೆದ ಸ್ವಚ್ಛತೆಯ ಅರಿವು ನೀಡುವ ಕಾರ್ಯಕ್ರಮದಲ್ಲಿ ೧೦,೨೫೮ ವಿದ್ಯಾರ್ಥಿಗಳು ಭಾಗವಹಿಸಿದರು.

ಇದಲ್ಲದೆ **ಕಾಮಾರಪುಕುರ** ಹಾಗೂ **ಕೊಯಿಲಾಂಡಿ** ಆಶ್ರಮಗಳು 'ಸ್ವಚ್ಛಭಾರತ' ಕಾರ್ಯಕ್ರಮಗಳನ್ನು ನಡೆಸಿದವು.






ಗ್ವಾಲಿಯರ್ ರಾಮಕೃಷ್ಣ ಮಿಷನ್ ನಲ್ಲಿ ಯೋಗ ಶಿಬಿರ

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020